ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 128-131
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಹೊಸದುರ್ಗ ತಾಲ್ಲೂಕಿನ ಪಾಳೆಯಗಾರರ ಕಾಲದ  ನಾಣ್ಯ ಮತ್ತು ಅಳತೆ ಮಾಪನಗಳು

**ಡಾ. ಕೆ.ಆರ್. ವಿವೇಕಾನಂದ**
ಇತಿಹಾಸ ಉಪನ್ಯಾಸಕರು, ಹೊಸದುರ್ಗ

***Abstract:***
*ತೆರಿಗೆ ಒಂದು ಸಾಮ್ರಾಜ್ಯದ ಆದಾಯದ ಮೂಲವಾಗಿದ್ದು, ಅದರ ಸಂಗ್ರಹಣೆಯಲ್ಲಿ ಬದಲಾವಣೆಗಳು ಆಗಬೇಕಾದರೆ ರಾಜ್ಯವು ಆರ್ಥಿಕವಾಗಿ ಸುಭಿಕ್ಷವಾಗಿರಬೇಕು. ಅಂತಹ ಒಂದು ಬದಲಾವಣೆಯನ್ನು ವಿಜಯನಗರ ಸಾಮ್ರಜ್ಯವು ಕೈಗೊಂಡಿತು. ತೆರಿಗೆಯನ್ನು ನಾಣ್ಯ ರೂಪದಲ್ಲಿ ನೀಡಬೇಕೆಂದು ಆಜ್ಞೆ ಮಾಡಿದ್ದುದರಿಂದ ಆ ಕಾಲದ ನಾಣ್ಯ ಪದ್ಧತಿಗೆ ಹೊಸ ಆಯಾಮ ದೊರಕಿತು  ಇದರಿಂದ ಹೊಸ ಸವಾಲುಗಳು ಎದುರಾದವು. ಅಂತಹ ಪರಿಸ್ಥಿತಿಯಲ್ಲಿ ಹೊಸ ಆಡಳಿತ ವಿಭಾಗವು ಅಸ್ಥಿತ್ವಕ್ಕೆ ಬಂದಿದ್ದು ಸಮರ್ಥವಾಗಿ ಸವಾಲುಗಳನ್ನು ಎದುರಿಸಿತು. ಹೊಸದುರ್ಗ ಪಾಳೆಯಗಾರರು ಯಾವುದೇ ಟಂಕ ಸಾಲೆಗಳನ್ನು ಹೊಂದದಿದ್ದರೂ, ವಿಜಯನಗರದ ನಾಣ್ಯಗಳನ್ನೇ ಬಳಸಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಚಿನ್ನ ಮತ್ತು ತಾಮ್ರದಿಂದ ಮಾಡಿದ ಹಲವಾರು ವಿಧದ ನಾಣ್ಯಗಳು ಚಾರಿಯಲ್ಲಿದ್ದ ಮಾಹಿತಿಯನ್ನು ಲೇಖನದಲ್ಲಿ ಸಂಗ್ರಹಿಸಲಾಗಿದೆ. ಅತಿ ಹೆಚ್ಚು ಚಿನ್ನದ ನಾಣ್ಯದ ಉಲ್ಲೇಖಗಳು ಕಂಡುಬಂದಿದ್ದು ಉತ್ತಮವಾದ ಆರ್ಥಿಕ ಸ್ಥಿತಿಯನ್ನು ಹೊಂದಿದ್ದನ್ನು ತಿಳಿಯಬಹುದು. ಅಳತೆ ಮಾಪನಗಳಿಗೆ ಸಂಬಂಧಿಸಿದಂತೆ ಹಲವು ಮಾನಗಳ ಬಗ್ಗೆ ಶಾಸನಗಳು ಬೆಳಕು ಚೆಲ್ಲುತ್ತವೆ. ಧಾನ್ಯ, ಭೂಮಿ ಅಳತೆಗಾಗಿ ಪ್ರತ್ಯೇಕ ಮಾನಗಳಿದ್ದವು. ತೆರಿಗೆ ಪದ್ಧತಿಯು ಸಫಲವಾಗಬೇಕಾದರೆ ಸದೃಢ ಅಳತೆ ವ್ಯವಸ್ಥೆ ಇರಬೇಕಾಗುತ್ತದೆ. ಪಾಳೆಯಗಾರರ ನಾಣ್ಯ ವ್ಯವಸ್ಥೆ ಸಫಲವಾಗಲು ಅವರ ಅಳತೆ ವ್ಯವಸ್ಥೆಯೂ ಸಹ ಕಾರಣ ಎಂಬುದನ್ನು ಪ್ರಸ್ತುತ ಲೇಖನ ತಿಳಿಸುತ್ತದೆ.*

**Keywords:** *ಟಂಕಶಾಲೆ, ನಾಣ್ಯ, ವರಹ, ಗದ್ಯಾಣ, ಪಗೋಡ, ದುಗ್ಗಣಿ, ಪಗೋಡ, ಹೊನ್ನು, ತೆರಿಗೆ, ಕೊಳಗ, ಮಾನ, ಬಳ್ಳ, ಮಾರು.*

**ಪೀಠಿಕೆ**

ಹೊಸದುರ್ಗ ಕರ್ನಾಟಕದ ಕೇಂದ್ರ ಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಒಂದಾಗಿದೆ. ಜಿಲ್ಲೆಯ ದಕ್ಷಿಣ ತುದಿಯಲ್ಲಿರುವ ಹೊಸದುರ್ಗವು, ಜಿಲ್ಲಾ ಕೇಂದ್ರದಿಂದ 60 ಕಿ.ಮೀ ದೂರದಲ್ಲಿದೆ. ಉತ್ತರಕ್ಕೆ ಹೊಳಲ್ಕೆರೆ ತಾಲೂಕು, ದಕ್ಷಿಣಕ್ಕೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು, ಪಶ್ಚಿಮಕ್ಕೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ಅಜ್ಜಂಪುರ ತಾಲೂಕುಗಳು ಹೊಸದುರ್ಗದೊಂದಿಗೆ ಗಡಿ ಹಂಚಿಕೊಂಡಿವೆ.

ವಿಜಯನಗರ ಆಡಳಿತವು ತೆರಿಗೆಯನ್ನು ನಾಣ್ಯರೂಪದಲ್ಲಿ ಕೊಡಬೇಕೆಂದು ಆಜ್ಞೆ ಮಾಡಿದ್ದುದರಿಂದ ಆ ಕಾಲದ ನಾಣ್ಯ ಪದ್ಧತಿಗೆ

***Please cite this article as:*** ವಿವೇಕಾನಂದ, ಕೆ.ಆರ್. (2024). ಹೊಸದುರ್ಗ ತಾಲೂಕಿನ ಪಾಳೆಯಗಾರರ ಕಾಲದ  ನಾಣ್ಯ ಮತ್ತು ಅಳತೆ ಮಾಪನಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 128–131

ಹೊಸ ಆಯಾಮ ದೊರಕಿತು. ಗರಿಷ್ಠ ಮತ್ತು ಕನಿಷ್ಠ ಮಟ್ಟದ ಹಾಗೂ ವಿವಿಧ ಮೌಲ್ಯಗಳ ನಾಣ್ಯಗಳನ್ನು ವಿಶೇಷವಾಗಿ ಟಂಕಿಸುವ ಅವಶ್ಯಕತೆ ತಲೆದೋರಿತು. ಟಂಕ ಶಾಲೆಯನ್ನು ನೋಡಿಕೊಳ್ಳುವುದಕ್ಕಾಗಿ ಒಂದು ಹೊಸ ಆಡಳಿತ ವಿಭಾಗವೇ ಅಸ್ತಿತ್ವಕ್ಕೆ ಬಂದಿತು.[1] ಹೊಸದುರ್ಗದ ಪಾಳೆಯಗಾರರು ಯಾವುದೇ ಟಂಕಸಾಲೆಯನ್ನು ಹೊಂದಿರುವ ಉಲ್ಲೇಖಗಳು ಕಂಡುಬರುವುದಿಲ್ಲ. ಪಾಳೆಯಗಾರರು ಆರಂಭದಲ್ಲಿ ವಿಜಯನಗರ ಸಾಮಂತರಾಗಿದ್ದರಿಂದ ಇವರು ವಿಜಯನಗರದ ನಾಣ್ಯಗಳನ್ನು ಬಳಸಿರುವುದು ಶಾಸನ[2] ಹಾಗೂ ಸಿರುಮನ ಸಾಂಗತ್ಯಗಳಲ್ಲಿ ಕಂಡುಬರುತ್ತವೆ. ಶಾಸನಗಳಲ್ಲಿ ವೀಸಾ[3], ಹಾಗ, ಪಣ, ವರಹ,[4] ಗದ್ಯಾಣ, ಪಗೋಡ, ದುಗ್ಗಣಿ[5] ಮುಂತಾದ ವಿವಿಧ ನಾಣ್ಯಗಳ ಉಲ್ಲೇಖಗಳಿವೆ.

ವಿಜಯ ನಗರದ ಅರಸರು ಹಂಪಿಯಲ್ಲಿ ಪ್ರಧಾನ ಟಂಕಶಾಲೆಯನ್ನು ಸ್ಥಾಪಿಸಿದರು. ರಾಜ್ಯದ ಇತರ ಭಾಗಗಳಲ್ಲಿ ಪ್ರಾದೇಶಿಕ ಟಂಕಶಾಲೆಗಳನ್ನು ಅಳವಡಿಸಿದ್ದರು. ನಾಣ್ಯಗಳಿಗೆ ವಿಶೇಷ ಬೇಡಿಕೆ ಇದ್ದುದರಿಂದ ಕೆಲವು ಪ್ರಮುಖ ಸಾಮಂತರಿಗೂ ಮತ್ತು ಕೆಲವು ಆಯ್ದ ಸ್ಥಳೀಯ ಸಂಸ್ಥೆಗಳಿಗೂ ನಾಣ್ಯಗಳನ್ನು ಟಂಕಿಸುವ ಗುರುತರ ಜವಾಬ್ದಾರಿಯನ್ನು ವಹಿಸಲಾಗುತ್ತಿತ್ತು. ಆದರೆ ಇದು ವಿಜಯನಗರ ಸರ್ಕಾರದ ಶ್ರೇಷ್ಠ ಅಧಿಕಾರಿಗಳ ಪೂರ್ಣ ನಿಯಂತ್ರಣದಲ್ಲಿ ಮಾತ್ರ ನಡೆಯುತ್ತಿದ್ದಿತು.[6] ಚಿತ್ರದುರ್ಗದ ಪಾಳೆಯಗಾರರ ನಾಣ್ಯಗಳು ದುರ್ಗಿಯೊಡನೆ ವಿಶೇಷ ಸಂಬಂಧವನ್ನು ಹೊಂದಿದ್ದವು ಎಂದು ಭಾವಿಸಲಾಗಿದೆ. ಈ ಸ್ಥಳದ ಸುತ್ತಮುತ್ತಲೂ 'ದುರ್ಗಿಪಗೋಡ' ಅಥವಾ 'ದುರ್ಗಿವರಹ' ಎನ್ನವುದು ಎಲ್ಲ ನಾಣ್ಯ ಸಂಗ್ರಹಕಾರರ ಬಾಯಲ್ಲೂ ಇರುವ ಮಾತು, ಇವರು ಟಂಕಿಸಿರುವ ಚಿನ್ನದ ನಾಣ್ಯಗಳಲ್ಲಿ ದುರ್ಗಿಯ ಚಿತ್ರವಿದೆ.[7] ಸಿರುಮನ ಸಾಂಗತ್ಯಗಳಲ್ಲಿ ಅಲ್ಲಲ್ಲಿ ಸಂದರ್ಭಾನುಸಾರವಾಗಿ ಹೊನ್ನು, ವರಹ, ಹಣ, ರೊಕ್ಕ, ನಾಣ್ಯ ಎಂಬ ಬಳಕೆ ಕಾಣಿಸಿಕೊಳ್ಳುತ್ತದೆ. ಸಣ್ಣ ಬಣ್ಣದ ಪಟ್ಟೆನಾಣ್ಯ, ಪರಿಪರಿ ನಾಣ್ಯಗಳೆಂದು 'ಸಿರುಮಣನಾಯಕನ ಸಾಂಗತ್ಯ' ಹೇಳಿದರೆ, 'ಕಟ್ಟಾಣಿಲ್ಲದ ಜೀಬಿ ನಾಣ್ಯ'ವೆಂಬುದನ್ನು 'ಗೊಲ್ಲಸಿರುಮನ ಚರಿತೆ' ಉಲ್ಲೇಖಿಸುತ್ತದೆ. 'ಗೊಲ್ಲ ಸಿರುಮನ ಚರಿತೆ'ಯಲ್ಲಿ 'ಹಾಗ' 'ಪಗೋಡ', 'ನಸುನಾಣ್ಯ'ಗಳ ಬಗೆಗೆ ಉಲ್ಲೇಖ ಕಂಡುಬರುತ್ತದೆ. ಈ ಮೇಲಿನ ಹೇಳಿದ ನಾಣ್ಯಗಳನ್ನು ಪರಿಶೀಲಿಸಿದ ಆಧಾರ ಮೇಲೆ ಒಂದು ಕೋಷ್ಟಕವನ್ನು ತಯಾರಿಸಬಹುದು.

**ಚಿನ್ನದ ನಾಣ್ಯಗಳು:**

1 ಗದ್ಯಾನ=1 ವರಹ=1 ಪೊನ್=1 ಪಗೋಡ= 52 ಗ್ರೇನ್

1 ವರಹ= 2 ಪ್ರತಾಪ= 1 ಮಾಡ= 52 ಗ್ರೇನ್

1 ಪ್ರತಾಪ = 2 ಕಾಟಿ =26 ಗ್ರೇನ್= ಅರ್ಧವರಹ

1 ಕಾಟಿ = 13 ಗ್ರೇನ್ = ಕಾಲುವರಹ

1 ವರಹ = 10 ಪಣ (5–6 ಗ್ರೇನ್)

1 ಚಿನ್ನ= 6.5 ಗ್ರೇನ್=ಎಂಟನೆಯ ಒಂದು ವರಹ

1 ಪಣ = 4 ಹಾಗ = 5–6 ಗ್ರೇನ್

1 ಹಾಗ = 2 ಬೇಳೆ= 1.5 ಗ್ರೇನ್

1 ಬೇಲೆ = 0.75 ಗ್ರೇನ್

**ತಾಮ್ರದ ನಾಣ್ಯಗಳು**

1 ದುಗ್ಗಾಣಿ=2 ಕಾಣಿ ಅಥವಾ 2 ಕಾಕಿಣಿ= 250 ಗ್ರೇನ್

1 ಕಾಣಿ = 125 = 2 ಅರೆಕಾಣಿ

1 ಜಿತಾಲ್ = ಮೂರನೆಯ ಒಂದು ತಾರ

1 ಕಾಸು = 30 ಗ್ರೇನ್ = ಅರೆಕಾಸು

1 ಅರೆಕಾಸು = 15 ಗ್ರೇನ್.[8]

ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತೀಯ ಇತಿಹಾಸದಲ್ಲಿ ಸುರ್ವಣಯುಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳಿಂದ ಎಂಬುದು ಸರ್ವವಿಧಿತ. ಇವರು ಟಂಕಿಸಿದ ಚಿನ್ನದ ನಾಣ್ಯಗಳಿಂದಲೂ ಇದನ್ನು ಸುವರ್ಣಯುಗ ಎಂದು ಸುಲಭವಾಗಿ ಕರೆಯಬಹುದು. ವಿಜಯನಗರದ ಸಾಮ್ರಾಟರು

ಟಂಕಿಸಿದ ವೈವಿಧ್ಯಪೂರ್ಣ ಹಾಗೂ ಶ್ರೀಮಂತ ಚಿನ್ನ, ಬೆಳ್ಳಿ, ಮತ್ತು ತಾಮ್ರದ ನಾಣ್ಯಗಳು ನಾಣ್ಯ ಶಾಸ್ತ್ರಜ್ಞರನ್ನು ಚಕಿತಗೊಳಿಸಿವೆ. ಈ ನಾಣ್ಯಗಳು ಆನಂತರ ಆಳಿದ ಅನೇಕ ರಾಜಮನೆತನಗಳ ನಾಣ್ಯಗಳ ಮೇಲೆ ವಿಶೇಷ ಪ್ರಭಾವ ಬೀರಿದವು. ಕೆಳದಿನಾಯಕರು, ಮೈಸೂರಿನ ಒಡೆಯರು, ಅನೇಕ ಪಾಳೆಯಗಾರರು ಕೊನೆಗೆ ಈಸ್ಟ್ ಇಂಡಿಯಾ ಕಂಪನಿ ವಿಜಯನಗರ ನಾಣ್ಯಗಳ ಕೆಲವು ಲಕ್ಷಣಗಳನ್ನು ತಮ್ಮ ನಾಣ್ಯಗಳಲ್ಲಿ ಅಳವಡಿಸಿ ಕೊಂಡವು ಪಾಳೆಯಗಾರರ ಕಾಲದಲ್ಲಿ ಶಾಸನ ಮತ್ತು ಸಾಂಗತ್ಯಗಳಲ್ಲಿ ಹೆಚ್ಚು ಚಿನ್ನದ ನಾಣ್ಯಗಳ ಉಲ್ಲೇಖಿತವಾಗಿರುವುದರಿಂದ ಉತ್ತಮವಾದ ಆರ್ಥಿಕ ಸ್ಥಿತಿಯನ್ನು ಹೊಂದಿದ್ದರು ಎಂದು ತಿಳಿಯುತ್ತದೆ.

**ಅಳತೆ ಮಾಪನಗಳು**

ಯಾವ ವಸ್ತುವನ್ನು ನಾವು ಅಳೆಯಬೇಕಾಗಿದೆಯೋ ಅದನ್ನು ಈಗಾಗಲೇ ಅಳೆದಿಟ್ಟ ಇನ್ನಾವುದೋ ಒಂದರ ಜೊತೆಗೆ ಹೋಲಿಸುವುದು ಅಥವಾ ಪರಿಚಿತ ಆಧಾರವನ್ನು ಬಳಿಸಿ ಅಳೆಯುವುದು. ಅಂದರೆ ಎಲ್ಲಾ ಅಳತೆಯೂ ಸಾಪೇಕ್ಷತೆಯನ್ನು (ಹೋಲಿಕೆಯನ್ನು) ಆಧರಿಸಿರುತ್ತದೆ. ಅಳತೆ ಎಂದರೆ ಯಾವುದೇ 'ಪ್ರಮಾಣದ ಗಾತ್ರ ಅಥವಾ ಪರಿಮಾಣವನ್ನು ಕಂಡು ಹಿಡಿದು ಅದನ್ನು ನಿರೂಪಿತ ಮಾನಗಳ ಒಂದು ಸಂಖ್ಯೆಯಾಗಿ ಅಭಿವೃದ್ಧಿ ಪಡಿಸುವುದು. ಇಂತಹ ಅಳತೆಯು ಪರಿಪೂರ್ಣ ಎನ್ನಿಸಿಕೊಳ್ಳುವುದು ಅದರಲ್ಲಿ ನಮಗೆ ವಿಶ್ವಾಸವೂ ಇದ್ದಾಗಲೇ ಅಂದರೆ ಒಂದು ಅಳತೆಯು ಸಮ್ಮತಿಸುವಂತಿದ್ದು ಇತರರ ಉಪಯೋಗಕ್ಕೂ ಬರುವಂತಿರಬೇಕು.[9] ಭಾರತದಲ್ಲಿ ಅಳತೆಗಳ ವ್ಯವಸ್ಥೆಯ ಚರಿತ್ರೆಯು ಸಿಂಧೂ ಕಣಿವೆಯ ನಾಗರಿಕತೆಯಿಂದಲೇ ಪ್ರಾರಂಭವಾಗುತ್ತದೆ. ಕೇಂದ್ರೀಕೃತ ಅಳತೆಯ ವ್ಯವಸ್ಥೆಯು ಈ ನಾಗರಿಕತೆಯ ವರ್ತಕರಿಗೆ ನೆರವಾಗಿರಬೇಕು. ದೊಡ್ಡ ತೂಕಗಳನ್ನು ವೈಭವದ ಚಿನ್ನ, ಬೆಳ್ಳಿ, ವಸ್ತುಗಳ ತೂಕಕ್ಕೆ ಉಪಯೋಗಿಸಲಾಗುತ್ತಿತ್ತು. ಹರಪ್ಪ ಸಂಸ್ಕೃತಿಯ ನಗರ ಯೋಜನೆ ಹಾಗೂ ವಾಸ್ತು ರಚನೆಗಳ ಅತ್ಯುತ್ತಮ ಉದಾಹರಣೆಗಳು. ಇಟ್ಟಿಗೆಗಳ ಆಕಾರವು ಮತ್ತು ನಗರಯೋಜನೆಗಳಿಗೆ ಏಕರೂಪದ ಉದ್ದ ಅಳತೆಗಳನ್ನು ಬಳಸಲಾಗಿದೆ. ಈ ನಾಗರಿಕತೆಯ ತೂಕ ಮತ್ತು ಅಳತೆಗಳ ಕ್ರಮವು ಪರ್ಶಿಯಾ ಮತ್ತು ಮಧ್ಯ ಏಷ್ಯಾಗಳಿಗೂ ತಲುಪಿದ್ದವು.

ಹೊಸದುರ್ಗ ತಾಲೂಕಿನ ಪ್ರಾಚೀನ ಕಾಲದಿಂದ ಪಾಳೆಯಗಾರರ ಕಾಲದವರೆಗಿನ ಶಾಸನದಲ್ಲಿ ಉಲ್ಲೇಖಿತವಾಗಿರುವ ಅಳತೆಯ ಪದ್ಧತಿಯನ್ನು ನಾವು ತಿಳಿಯಬಹುದು. ಕೊಳಗ, ಮಾನ, ಬಳ್ಳ ಇತ್ಯಾದಿಗಳು ಧಾನ್ಯಗಳ ಅಳತೆಯಲ್ಲೂ, ಸೊಳವನ್ನು ದ್ರವ ಪದಾರ್ಥಗಳ ಅಳತೆಯಲ್ಲೂ ಬಳಸುತ್ತಿದ್ದಿರುವುದು ಕಂಡುಬರುತ್ತದೆ. ಭೂಮಾಪನ ಮಾಡುವಾಗ ಮಾರು, ವೊತ್ತೋಳು, ಮಾಣಿಕದ ಕೋಲು, ಗಡಿಗಂಬ ಕೋಲು,[10] ಮನೆಯೊಂದರ ಕೈ ಅಳತೆಯನ್ನು ಬಡಗ ಅಗಲ 10 ಕಯಿ, ಉದ್ದ 20ಕಯಿ ಎಂದು.[11] ಒಂದು ದಿನ ಒಂದು ಕೂರಿಗೇಲಿ ಬಿತ್ತುವಷ್ಟು ಭೂಮಿ[12] ಅಳತೆಮಾನ ನಿಗದಿಪಡಿಸಿರುವುದು ತಿಳಿಯುತ್ತದೆ. ಮತ್ತೋಡು ಪಾಳೆಯಗಾರರಲ್ಲಿ ಒಕ್ಕಲುತನ ಮಾಡುವ ರೈತರು ಒಂದು ಬೆಳೆಗೆ ಆರು ಸೇರು ದವಸದಂತೆ ಸುಂಕ ಸಲ್ಲಿಸಬೇಕಾಗಿತ್ತು.[13] ಇನ್ನು 'ಸಿರುಮನ ಸಾಂಗತ್ಯದಲ್ಲಿ' ಅಳತೆಗಳಲ್ಲಿ ಖಂಡುಗ, ಗಿದ್ದನ, ಪಡಿ ಎಂಬ ಧಾನ್ಯ ಅಳೆಯುವ ಮಾಪನಗಳು ಕಾಣಿಸಿಕೊಳ್ಳುತ್ತವೆ. ಅದೇ ರೀತಿ ಗಾವುದ, ಕೂಗಳತೆ, ಹರ ದಾರಿಗಳೆಂಬ ದೂರದ ಮಾಪನಗಳು ಉಲ್ಲೇಖಿತವಾಗಿವೆ. ತೆರಿಗೆ ಗೊತ್ತು ಮಾಡಬೇಕಾದರೆ ಅಥವಾ ಭೂದಾನ ಮಾಡುವಾಗ ಇಂಥ ಅಳತೆಗಳನ್ನು ಬಳಸಿರುವುದು ಕಂಡುಬರುತ್ತದೆ.

**ಕೊನೆ ಟಿಪ್ಪಣಿ**

1. ನರಸಿಂಹಮೂರ್ತಿ, ಎ.ವಿ. (2008). *ಭಾರತೀಯ ನಾಣ್ಯ ಪರಂಪರೆ.* ಪುಟ. 122
2. ಅದೇ. ಪುಟ. 113.

3. ರೈಸ್, ಬಿ.ಎಲ್. (1903). *ಎಫಿಗ್ರಾಫಿಯಾ ಕರ್ನಾಟಿಕ. ಸಂಪುಟ–11.* ಶಾಸನ ಸಂಖ್ಯೆ–113.
4. ಅದೇ. ಪುಟ. 98.
5. ಅದೇ. ಪುಟ. 112.
6. ನರಸಿಂಹಮೂರ್ತಿ, ಎ.ವಿ. (2008). ಪೂರ್ವೋಕ್ತ, ಪುಟ. 123
7. ಅದೇ. ಪುಟ. 179.
8. ನರಸಿಂಹಮೂರ್ತಿ, ಎ.ವಿ. (1996). *ವಿಜಯನಗರದ ನಾಣ್ಯ ಸಂಪತ್ತು.* ಪುಟ. 25
9. ನರಹರಿ, ವಿ. (2011). *ವಿಶೇಷ ನಿಖರತೆಯ ಅಳತೆಗಳು.* ಪುಟ.7
10. ರೈಸ್, ಬಿ.ಎಲ್. (1903). *ಎಫಿಗ್ರಾಫಿಯಾ ಕರ್ನಾಟಿಕ. ಸಂಪುಟ–11.* ಶಾಸನ ಸಂಖ್ಯೆ–124.
11. ಅದೇ. ಪುಟ. 136.
12. ಅದೇ. ಪುಟ. 127.
13. ಬಾಗೂರು ನಾಗರಾಜಪ್ಪ. (2018). *ಹೊಸದುರ್ಗ ತಾಲೂಕು ಗ್ಯಾಸೆಟಿಯರ್.* ಪುಟ. 192

**ಪರಾಮರ್ಶನ ಗ್ರಂಥಗಳು**


- ಬಾಗೂರು ನಾಗರಾಜಪ್ಪ. (2018). *ಹೊಸದುರ್ಗ ತಾಲೂಕು ಗ್ಯಾಸೆಟಿಯರ್.* ಕರ್ನಾಟಕ ಸರ್ಕಾರ.
- ಕಲಬುರ್ಗಿ, ಎಂ.ಎಂ. (2012). *ಸಿರುಮನ ಸಾಂಗತ್ಯಗಳು.* ಸಪ್ನ ಬುಕ್ ಹೌಸ್.
- ನರಸಿಂಹಮೂರ್ತಿ, ಎ.ವಿ. (1996). *ವಿಜಯನಗರದ ನಾಣ್ಯ ಸಂಪತ್ತು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ನರಸಿಂಹಮೂರ್ತಿ, ಎ.ವಿ. (2008). *ಭಾರತೀಯ ನಾಣ್ಯ ಪರಂಪರೆ.* ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ
- ನರಹರಿ, ವಿ. (2011). *ವಿಶೇಷ ನಿಖರತೆಯ ಅಳತೆಗಳು.* ಪ್ರತಿಭಾ ಪ್ರಕಾಶನ.
- ರಾಜಶೇಖರಪ್ಪ, ಬಿ. (2001). *ಇತಿಹಾಸ ಕಥನ.* ಸಿ.ವಿ.ಜಿ. ಪಬ್ಲಿಕೇಷನ್ಸ್.
- ರೈಸ್, ಬಿ.ಎಲ್. (1903). *ಎಫಿಗ್ರಾಫಿಯಾ ಕರ್ನಾಟಿಕ. ಸಂಪುಟ–11.* ಸರ್ಕಾರಿ ಕೇಂದ್ರೀಯ ಮುದ್ರಣಾಲಯ.